Providing Namaz facilities to the Muslim Members of the House

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಅಧ್ಯಕ್ಷರೇ, ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅಧಿವೇಶನ ಪ್ರತಿದಿನ ಒಂದು ಗಂಟೆಗೆ ಪ್ರಾರಂಭವಾಗುತ್ತೆ. ನಾವು ಒಂದು ಗಂಟೆಗೆ ಸಭೆಗೆ ಬಂದರೆ ನಂತರ ಹೊರಗೆ ಹೋಗುವುದಕ್ಕಾಗುವುದಿಲ್ಲ. ನಾವು ಮೂಳು ಜನ ಮುಸ್ಲಿಂ ಭಾಂದವರು ಈ ಕಡೆ ಇದ್ದೇವೆ. ನಾವು ದಿನಕ್ಕೆ ೫ ಸಲ ನಮಾಜ ಮಾಡಬೇಕು ಆದ್ದರಿಂದ ಕೊನೇಪಕ್ಷ ೩ ಹೊತ್ತಾದರೂ ನಮಾಜ್ ಮಾಡಲಿಕ್ಕೆ ಲಾಭಿಯಲ್ಲಾಗಲೀ ಅಥವಾ ಬೇರೆ ಎಲ್ಲಾದರಾಗಲೀ ಜಾಗ ಮಾಡಿಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಆಗ ಓಟ್ಪಿಗೆ ಹಲವು ಸದಸ್ಯರು ಮಾತನಾಡುತ್ತಿದ್ದರು)

ಶ್ರೀ ಸಿ. ಎಂ. ಇಬ್ರಾಹಿಂ.—ಅಲ್ಪಸಂಖ್ಯಾತರ ಸರ್ಕಾರ ನಮಾಜ ಮಾಡುವುದೂ ಬೇಡ ಅಂತೀರಾ ? ಕನಿಷ್ಟ ಪಕ್ಷ ನಮಾಜ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ,

ಶ್ರೀ ಸಿ. ಎಂ. ಇಬ್ರಾಹಿಂ.—ನಾವು ಪ್ರೇಯರ್ ಮಾಡುವುದನ್ನು ಬಿಟ್ಟು ರಾಜಕೀಯ ಮಾಡುವುದಕ್ಕೆ ತಯಾರಾಗಿಲ್ಲ. ಕೊನೆಯ ಪಕ್ಷ ಪ್ರತಿ ಶುಕ್ರವಾರ ೨-೩೦ಕ್ಕೆ ಸಭೆ ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಪ್ರಾರ್ಥನೆಯನ್ನು ಯಾವ ರೀತಿ ಮಾಡಿಕೊಳ್ಳಬೇಕೆಂಬುದು ಸಭೆಯಲ್ಲಿ ಪ್ರಸ್ತಾಪ ಮಾಡುವಂತ ವಿಚಾರವಲ್ಲ.

ಶ್ರೀ ಕೆ. ಎಚ್. ರಂಗನಾಥ್.—ನಮಗೆ ನಮಾಜಿಗೆ ವ್ಯವಸ್ಥೆ ಮಾಡುವುದಕ್ಕೆ, ಚರ್ಚಿನಲ್ಲಿ ಪ್ರಾರ್ಥನೆ ವ್ಯವಸ್ಥೆ ಮಾಡುವುದಕ್ಕೆ ಸಂಧ್ಯಾವಂದನೆಗಳಿಗೆ ವ್ಯವಸ್ಥೆ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಅದು ಅವರವರಿಗೆ ಬಿಟ್ಟಿದ್ದು. ಇದರಲ್ಲಿ ಕ್ಷಮಿಸುವ ಪ್ರಶ್ನೆಯೇ ಇಲ್ಲ. ರಾಜ್ಯಾಂಗಬದ್ಧವಾದ ರೀತಿಯಲ್ಲಿ ಕೆಲಸ ಮಾಡುತ್ತೇವೆಂಬುದಾಗಿ ಮೊನ್ನೆತಾನೇ ಪ್ರಮಾಣವಚನ ಸ್ವೀಕಾರ ಮಾಡಿದ್ದೇವೆ. ಅದರ ಪ್ರಕಾರ ಎಷ್ಟರ ಮಟ್ಟಿಗೆ ಇಲ್ಲಿ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆಯೋ ಅಷ್ಟನ್ನು ಮಾಡಿಕೊಳ್ಳಬೇಕೇ ವಿನ, ಈ ರೀತಿ ನಮಾಜಿಗೆ, ಚರ್ಚಿಗೆ ಪ್ರಾರ್ಥನೆಗೆ ಸಂಧ್ಯಾವಂದನೆಗಳಿಗೆಲ್ಲಾ ವ್ಯವಸ್ಥೆ ಮಾಡುತ್ತಾ ಹೋದರೆ ಇನ್ನೂ ಯಾವ ಯಾವುದಕೆ ವ್ಯವಸ್ಥೆಮಾಡಬೇಕು ಎಂಬುದಾಗಿ ಬೇಡಿಕೆ ಬರುತ್ತದೋ ಏನೋ.....

MR. QAMARUL ISLAM.—At least on Fridays, the Session should not start from One O' Clock. It is my request. The Hon. Speaker may kindly consider it.

MR. SPEAKER.—I must examine it.

ಶ್ರೀ ಸಿ. ಎಂ. ಇಬ್ರಾಹಿಂ.—ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಕಾನೂನಿನಲ್ಲಿ ಪ್ರಾವಿಜನ್ ಇಲ್ಲ ಎಂಬುದಾಗಿ ಹೇಳಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಕಣ್ಣು ಮಿಟಿಕಿಸಿ ಹೇಳುತ್ತಿದ್ದಾರೆ. ನಾನು ಕಾನೂನಿನಲ್ಲಿ ಇದ್ದದನ್ನು ಹೇಳಿದ್ದೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಸಚಿವರಾದ ಶ್ರೀಮಾನ್ ಅಜೀಜ್ ಶೇಠ್‌ರವರನ್ನೇ ಈ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡೋಣ. ಈಗ ಇರತಕ್ಕ ಕಾನೂನಿಗೆ ತಿದ್ದುಪಡಿ ತರುವುದಕ್ಕೆ ಸಾಧ್ಯ ವಿದೆಯೋ ಎಂಬುದನ್ನು ನೋಡೋಣ.

ಶ್ರೀ ಭೀಮಣ್ಣ ಖಂಡ್ರೆ.—ಸದನದಲ್ಲಿ ಇಬ್ಬರು ಸದಸ್ಯರು ಒಂದೇ ಸಮಯದಲ್ಲಿ ಮಾತನಾಡುತ್ತಿದ್ದಾರೆ. ಅದಕ್ಕೆ ನನ್ನ ಪಾಯಿಂಟ್ ಆಫ್ ಆರ್ಡರ್.